ದಿನಾಂಕ: **09** −03−2021 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ದಾವಾ ಆಸ್ತಿಯ ಕಂದಾಯವನ್ನು 8 ನೇ ಪ್ರತಿವಾದಿ ಕಟ್ಟಿರುತ್ತಾಳೆ. ಅವರ ಹೆಸರು ಶಾಹೀದಾ ಬೇಗಂ ಇರುತ್ತದೆ. ದಿನಾಂಕ ನೆನಪಿರುವುದಿಲ್ಲ. ದಾವಾ ಆಸ್ತಿಯನ್ನು 8 ನೇ ಪ್ರತಿವಾದಿಗೆ ನ್ಯಾಯಾಲಯದಲ್ಲಿ ಬಿಟ್ಟು ಕೊಟ್ಟ ನಂತರ ಕಂದಾಯ ಪಾವಾತಿಸಿದ್ದಾರೆ. ಫಾರಂ ನಂ,10 ಅಂದರೆ ಪಟ್ಟಾ,ಅದನ್ನು ಹಕ್ಕು ಬಿಟ್ಟು ಕೊಟ್ಟ ಪತ್ರ ಅಂದರೆ ನಿಜ ಟ್ರಿಬ್ಯುನಲ್ ಆದೇಶದ ಮೇರೆಗೆ ಫಾರಂ ನಂ,10 ನ್ನು ಕೊಟ್ಟಿದ್ದಾರೆ. ಟ್ರಿಬ್ಯುನಲ್ ಆದೇಶವನ್ನು ನಾನು ನೋಡಿದ್ದೇನೆ. ಸರ್ವೆ ನಂ. 282 ಒಟ್ಟು ಕ್ಷೇತ್ರ 06 ಎಕರೆ 4 ಗುಂಟೆ ಇರುತ್ತದೆ. 06 ಎಕರೆ 04 ಗುಂಟೆ ಪೈಕಿ ಉತ್ತರ ಭಾಗದ 03 ಎಕರೆ 04 ಗುಂಟೆ ಕೊಟ್ಟಿದ್ದಾರೆ. ನಾನು ಭೂನ್ಯಾಯಮಂಡಳಿ ಆದೇಶವನ್ನು ನೋಡಿಲ್ಲ ಅಂದರೆ ಸರಿಯಲ್ಲ. ನನಗೆ ಕನ್ನಡ ಅಲ್ಪ ಸ್ವಲ್ಪ ಓದಲು ಬರುತ್ತದೆ. ಅಬ್ದುಲ್ ಸಾಬ ಲೋಹಾರ ಎನ್ನುವವರಿಗೆ ದಕ್ಷಿಣ ಭಾಗದ ಕ್ಷೇತ್ರ ಭೂನ್ಯಾಯಮಂಡಳಿಯಿಂದ ಆದೇಶವಾಗಿದೆ ಅಂದರೆ ನನಗೆ ನೆನಪಿರುವುದಿಲ್ಲ. ನನಗೆ ದಕ್ಷಿಣ ಭಾಗದ ಆಸ್ತಿಯನ್ನು ಸಂಪೂರ್ಣವಾಗಿ ಮಾರಾಟವಾಗಿದೆ ಅಂತಾ ಮಾಹಿತಿ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಅಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ